## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಉಪವಿಭಾಗಗಳು ಮತ್ತು ಅದಕ್ಕೆ ಹೊಂದಿಕೊಂಡಿರುವ ಹುದ್ದೆಗಳನ್ನು ದಿನಾಂಕ: 01.04.2020 ರಿಂದ 31.03.2021 ರವರೆಗೆ ಮುಂದುವರೆಸುವ ಬಗ್ಗೆ.

**ಉಲ್ಲೇಖ:**

1. ಸರ್ಕಾರದ ಆದೇಶ ಸಂಖ್ಯೆ: ಜಸಂಇ 38 ಸೇಸಎ 2014, ದಿನಾಂಕ: 04.04.2014
2. ಸರ್ಕಾರದ ಆದೇಶ ಸಂಖ್ಯೆ: ಜಸಂಇ 40 ಸೇಸಎ 2015, ದಿನಾಂಕ: 04.03.2015.
3. ಸರ್ಕಾರದ ಆದೇಶ ಸಂಖ್ಯೆ: ಜಸಂಇ 77 ಸೇಎಸು 2016, ದಿನಾಂಕ: 01.06.2016.
4. ಸರ್ಕಾರದ ಆದೇಶ ಸಂಖ್ಯೆ: ಜಸಂಇ 125 ಸೇಎಸು 2017, ದಿನಾಂಕ: 31.07.2017.
5. ಸರ್ಕಾರದ ಆದೇಶ ಸಂಖ್ಯೆ: ಜಸಂಇ 61 ಸೇಎಸು 2018, ದಿನಾಂಕ: 21.08.2018.
6. ಸರ್ಕಾರದ ಆದೇಶ ಸಂಖ್ಯೆ: ಜಸಂಇ 27 ಸೇಎಸು 2019, ದಿನಾಂಕ: 22.05.2019.
7. ನಿರ್ದೇಶಕರು ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕೃಷ್ಣರಾಜ ಸಾಗರ ಇವರ ಪತ್ರ ಸಂಖ್ಯೆ: ಕೆಇಆರ್‌ಎಸ್/ಸಿ-2/ತಾಹುಮುಂ/3863-72, ದಿನಾಂಕ: 27.12.2019.

**ಪ್ರಸ್ತಾವನೆ:**

ಮೇಲೆ (1) ರಿಂದ (6) ರಲ್ಲಿ ಓದಲಾದ ಸರ್ಕಾರದ ಆದೇಶಗಳಲ್ಲಿ ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಕಛೇರಿಗಳು ಹಾಗೂ ಅದಕ್ಕೆ ಹೊಂದಿಕೊಂಡಿರುವ ವಿವಿಧ ವೃಂದದ 66 ಹಂಗಾಮಿ ಹುದ್ದೆಗಳನ್ನು ದಿನಾಂಕ: 31.03.2020 ರವರೆಗೆ ಮುಂದುವರೆಸಲಾಗಿದೆ.

2. ಮೇಲೆ (7) ರಲ್ಲಿ ಓದಲಾದ ದಿನಾಂಕ: 27.12.2019ರ ಪತ್ರದಲ್ಲಿ ನಿರ್ದೇಶಕರು, ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕೆ.ಆರ್.ಸಾಗರ, ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಕಛೇರಿಗಳು ಮತ್ತು ಅದಕ್ಕೆ ಹೊಂದಿಕೊಂಡಿರುವ ಹುದ್ದೆಗಳನ್ನು ದಿನಾಂಕ: 01.04.2020 ರಿಂದ ಶಾಶ್ವತವಾಗಿ ಮುಂದುವರೆಸಲು ಕೋರಿರುತ್ತಾರೆ, ಸರ್ಕಾರವು ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆ.ಇ.ಆರ್.ಎಸ್, ಸಂಸ್ಥೆಯಲ್ಲಿ ಮುಂದುವರೆಸಲು ಕೋರಿರುವ ಒಟ್ಟು 71 ಹಂಗಾಮಿ ಹುದ್ದೆಗಳ ಪೈಕಿ ಐದು ಗ್ರೂಪ್-ಡಿ

2.6.2020

ಹುದ್ದೆಗಳು ಸಂಖ್ಯಾತಿರಿಕ್ತ (ಸೂಪರ್ ನ್ಯೂಮರರಿ) ಹುದ್ದೆಗಳಾಗಿರುವುದರಿಂದ ಈ ಹುದ್ದೆಗಳನ್ನು ಕೈಬಿಟ್ಟು ಸದರಿ ಕಛೇರಿಗಳು ಹಾಗೂ ಅದಕ್ಕೆ ಹೊಂದಿಕೊಂಡಿರುವ 66 ಹಂಗಾಮಿ ಹುದ್ದೆಗಳನ್ನು ಮಾತ್ರ ದಿನಾಂಕ: 01.04.2020 ರಿಂದ 31.03.2021 ರವರೆಗೆ ಒಂದು ವರ್ಷದ ಅವಧಿಗೆ ಮುಂದುವರೆಸಲು ತೀರ್ಮಾನಿಸಿದೆ. ಅದರಂತೆ, ಈ ಕೆಳಕಂಡ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 109 ಸೇಎಸು 2019,**
**ಬೆಂಗಳೂರು, ದಿನಾಂಕ:20.06.2020**

3. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ ಕೆ.ಆರ್.ಸಾಗರ ಇದರ ಅಧೀನದಲ್ಲಿರುವ ಈ ಆದೇಶದಲ್ಲಿನ ಅನುಬಂಧ-1 ರಿಂದ 5ರ ವರೆಗೆ ನಮೂದಿಸಿರುವ ತಾತ್ಕಾಲಿಕ ಕಛೇರಿಗಳು ಹಾಗೂ ಅವುಗಳಿಗೆ ಹೊಂದಿಕೊಂಡಿರುವ 66 ಹಂಗಾಮಿ ಹುದ್ದೆಗಳನ್ನು ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅದ್ಯತೆಯ ಮೇರೆಗೆ ರಚಿಸಿಕೊಳ್ಳುವ ಷರತ್ತಿಗೊಳ್ಳಪಟ್ಟು ದಿನಾಂಕ: 01.04.2020 ರಿಂದ ದಿನಾಂಕ: 31.03.2021 ರವರೆಗೆ ಒಂದು ವರ್ಷದ ಅದಧಿಗೆ ಮುಂದುವರೆಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

4. ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ 01 ಟಿ ಎಫ್ ಪಿ 96, ದಿನಾಂಕ: 10.07.1996 ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
20.6.2020
(ಕೆ. ಎಲ್. ಪ್ರಸಾದ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ, ಸೇವೆಗಳು-ಎ) .

20/06

**ಇವರಿಗೆ:**

1. ಮಹಾಲೇಖಪಾಲರು, (ಎ ಮತ್ತು ಇ) ಕರ್ನಾಟಕ, ಬೆಂಗಳೂರು-560001.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು-560001.
3. ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು-560009.
4. ನಿರ್ದೇಶಕರು, ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕೆ.ಆರ್.ಸಾಗರ, ಮಂಡ್ಯ ಜಿಲ್ಲೆ.
5. ಪ್ರಾಂಶುಪಾಲರು, ಕರ್ನಾಟಕ ಇಂಜಿನಿಯರಿಂಗ್ ಸಿಬ್ಬಂದಿ ಕಾಲೇಜು, ಕೆ.ಆರ್. ಸಾಗರ, ಮಂಡ್ಯ ಜಿಲ್ಲೆ.
6. ಮುಖ್ಯ ಇಂಜಿನಿಯರ್, ಕಾನೀನಿನಿ, ನೀರಾವರಿ (ದಕ್ಷಿಣ) ವಲಯ, ಮೈಸೂರು.
7. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಬೆಂಗಳೂರು-560001.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ ಇವರ ಆಪ್ತ ಸಹಾಯಕರಿಗೆ.
9. ಸರ್ಕಾರದ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ ಇವರ ಆಪ್ತ ಸಹಾಯಕರಿಗೆ.
10. ಸರ್ಕಾರದ ಉಪ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸೇವೆಗಳು) ಇವರ ಆಪ್ತ ಸಹಾಯಕರಿಗೆ.
11. ನಿರ್ದೇಶಕರು, ಜಿಯೋ ಮೆಟ್ರಿಕ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
12. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

ಸರ್ಕಾರದ ಆದೇಶ ಸಂಖ್ಯೆ: ಜಸಂಇ 109 ಸೇಎಸು 2019, ದಿನಾಂಕ: 20.06.2020ಕ್ಕೆ

## ಅನುಬಂಧ-1

### ಅಣೆಕಟ್ಟು ಸುರಕ್ಷಣಾ ಕೋಶ ಸಿಬ್ಬಂದಿ ವಿವರಣೆ

| ಕ್ರ.ಸಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 1 | ಸಹಾಯಕ ಕಾರ್ಯಪಾಲಕ ಇಂಜಿನಿಯರ್ | 1 |
| 2 | ಸಹಾಯಕ ಇಂಜಿನಿಯರ್ | 4 |
| 3 | ಬೆರಳಚ್ಚುಗಾರ | 1 |
| 4 | ರೆಕಾರ್ಡ್ ಕೀಪರ್ | 1 |
| | ಒಟ್ಟು | 7 |

## ಅನುಬಂಧ-2

### ಇಂಜಿನಿಯರಿಂಗದ ಸಿಬ್ಬಂದಿ ಕಾಲೇಜು, ಕೃಷ್ಣರಾಜಸಾಗರ ಸಿಬ್ಬಂದಿ ವಿವರಣೆ

| ಕ್ರ.ಸಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 1 | ಪ್ರಾಧ್ಯಾಪಕರು | 2 |
| 2 | ಉಪ ಪ್ರಾಧ್ಯಾಪಕರು | 6 |
| 3 | ಲೆಕ್ಚರರ್ | 3 |
| 4 | ಕಿರಿಯ ಇಂಜಿನಿಯರ್ | 2 |
| 5 | ಅಧೀಕ್ಷಕರು | 1 |
| 6 | ಲೆಕ್ಕ ಅಧೀಕ್ಷಕರು | 1 |
| 7 | ಪ್ರಥಮ ದರ್ಜೆ ಸಹಾಯಕ | 1 |
| 8 | ಪ್ರಥಮ ದರ್ಜೆ ಲೆಕ್ಕ ಸಹಾಯಕ | 1 |
| 9 | ದ್ವಿತೀಯ ದರ್ಜೆ ಸಹಾಯಕ | 2 |
| 10 | ಶೀಘ್ರಲಿಪಿಗಾರರು | 1 |
| 11 | ಬೆರಳಚ್ಚುಗಾರರು | 4 |
| 12 | ವಾಹನ ಚಾಲಕರು | 2 |
| 13 | ಅನುಚರರು | 3 |
| 14 | ಜವಾನರು | 3 |
| 15 | ಕಾವಲುಗಾರರು | 2 |
| 16 | ಅಡಿಗೆಯವರು | 1 |
| 17 | ಛಾಯಾಗ್ರಾಹಕ | 1 |
| | ಒಟ್ಟು | 36 |

20.6.2020

ಅನುಬಂಧ-3

ಅಣೆಕಟ್ಟು ಸುರಕ್ಷಣಾ ಕೋಶ-2. ಕೆ.ಇ.ಆರ್.ಎಸ್.ಕೃಷ್ಣ ರಾಜ ಸಾಗರ

| ಕ್ರ.ಸಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 1 | ಸಂಶೋಧನಾ ಅಧಿಕಾರಿ | 1 |
| 2 | ಸಹಾಯಕ ಸಂಶೋಧನಾ ಅಧಿಕಾರಿ | 3 |
| 3 | ಕಿರಿಯ ಸಂಶೋಧನಾ ಅಧಿಕಾರಿ | 3 |
| 4 | ಪ್ರಥಮ ದರ್ಜೆ ಸಹಾಯಕ | 1 |
| 5 | ದ್ವಿತೀಯ ದರ್ಜೆ ಸಹಾಯಕ | 1 |
| 6 | ಗ್ರೂಪ್-ಡಿ ನೌಕರರು | 3 |
| | ಒಟ್ಟು | 12 |

ಅನುಬಂಧ-4

ಮೂಲ ಮೇಲ್ನೀರು ಬಲಪಡಿಸುವ ಉಪವಿಭಾಗ, (ಎಸ್.ಎಸ್.ಡಬ್ಲ್ಯೂ.ಬಿ.ಓ. ಉಪವಿಭಾಗ)

| ಕ್ರ.ಸಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 1 | ಸಹಾಯಕ ಕಾರ್ಯಪಾಲಕ ಇಂಜಿನಿಯರ್ | 1 |
| 2 | ಕಿರಿಯ ಇಂಜಿನಿಯರ್ | 1 |
| 3 | ಸಹಾಯಕ ಇಂಜಿನಿಯರ್ | 2 |
| 4 | ಪ್ರಥಮ ದರ್ಜೆ ಸಹಾಯಕ | 1 |
| 5 | ದ್ವಿತೀಯ ದರ್ಜೆ ಸಹಾಯಕ | 1 |
| 6 | ಬೆರಳಚ್ಚುಗಾರ | 1 |
| 7 | ವಾಹನ ಚಾಲಕ | 1 |
| 8 | ಜವಾನರು | 2 |
| | ಒಟ್ಟು | 10 |

ಅನುಬಂಧ-5

ಭೂಗುಣ ತಂತ್ರ ವಿಜ್ಞಾನ ಮತ್ತು ತಳಪಾಯ ಇಂಜಿನಿಯರಿಂಗ್ ವಿಭಾಗ,

| ಕ್ರ.ಸಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 1 | ವಾಹನ ಚಾಲಕರು | 1 |
| | ಒಟ್ಟು | 1 |

20.6.2000

(ಕೆ. ಎಲ್. ಪ್ರಸಾದ್)

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ, ಸೇವೆಗಳು-ಎ).

20/06